ಇಂದು ದಿ**: 05.02.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.**

ಪಾಟೀ ಸವಾಲು **5** ರಿಂದ **9** ನೇ ಪ್ರತಿವಾದಿಗಳ ಪರಃ ಶ್ರೀ ಆರ್ ಕೆ ವಕೀಲರಿಂದ

ನಾನು 7 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ವ್ಯವಹಾರದ ಜ್ಞಾನ ಚೆನ್ನಾಗಿ ಇರುತ್ತದೆ. ಈ ಕೇಸನ್ನು ವಾದಿ ಆಶಾ ಇವಳು ನಾಗೆಂದ್ರಪ್ಪ, ಶರಣಪ್ಪ,ದ್ಯಾಮಪ್ಪ ಮತ್ತು ಆಂಜಿನಪ್ಪ ಇವರ ವಿರುದ್ಧ ಸಲ್ಲಿಸಿರುತ್ತಾಳೆ. ಜಮೀನನ್ನು ನೊಂದಣಿ ಮಾಡಿಸಿಕೊಡಲು ಬರದ ಕಾರಣ ಈ ದಾವೆಯನ್ನು ಸಲ್ಲಿಸಿರುತ್ತಾಳೆ. ವಾದಿ ಸಲ್ಲಿಸಿರುವ ಕೇಸಿನ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಸದರಿ ಮಾಹಿತಿಯನ್ನು ನನಗೆ ವಾದಿಯ ಗಂಡ ಗುರುಸಿದ್ದಪ್ಪ ಕೊಟ್ಟಿರುತ್ತಾನೆ. ಅವರು ಏನು ಮಾಹಿತಿ ಕೊಟ್ಟಿರುತ್ತಾರೋ ಅದರ ಪ್ರಕಾರ ನಾನು ಮತ್ತು ಪಿಡಬ್ಲ್ಯು 2 ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿರುತ್ತೇವೆ ಎನ್ನುವುದು ನಿಜ. ನನ್ನ ಮತ್ತು ಪಿಡಬ್ಲ್ಯು 2 ರವರ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಏಕಕಾಲದಲ್ಲಿ ಬೆರಳಚ್ಚು ಮಾಡಿಸಿ ಗುರುಸಿದ್ದಪ್ಪ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ ಎಂದರೆ ಸಾಕ್ಷಿ ವಕೀಲರ ಮೂಲಕ ಹಾಜರುಪಡಿಸಿರುತ್ತೇವೆ ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಷಯಗಳನ್ನು ಗುರುಸಿದ್ದಪ್ಪ ಬೆರಳಚ್ಚು ಮಾಡಿಸಿರುತ್ತಾರೆ ಎನ್ನುವುದು ನಿಜ. ಆ ಪ್ರಕಾರವಾಗಿ ನಾನು ಸಾಕ್ಷಿ ಹೇಳಲು ಬಂದಿರುತ್ತೇನೆ ಎನ್ನುವುದು ನಿಜ. ವಾದಿಯ ಗಂಡ ಗುರುಸಿದ್ದಪ್ಪ ಚಿಕ್ಕವಯಸ್ಸಿನಿಂದಲೂ ನನಗೆ ಗೊತ್ತು. ನಾನು ಗ್ರಾಮಪಂಚಾಯಿತಿಯ ಸದಸ್ಯನಾಗಿದ್ದರಿಂದ, ಗ್ರಾಮದ ಎಲ್ಲಾ ಜನರು ಪರಿಚಯ ಮತ್ತು ವಿಶ್ವಾಸ ಇರುತ್ತದೆ ಎನ್ನುವುದು ನಿಜ. ಗುರುಸಿದ್ದಪ್ಪನ ತಾಯಿಯ ತವರೂರು ನಮ್ಮ ಊರು. ಹಾಗಾಗಿ ನಮಗೂ ಅವರ ಕುಟುಂಬಕ್ಕೂ ವಿಶ್ವಾಸ ಇರುತ್ತದೆ ಎಂದರೆ ಸಾಕ್ಷಿ ಪರಿಚಯ ಎಂದು ಹೇಳುತ್ತಾರೆ. ಗುರುಸಿದ್ದಪ್ಪನ ತಾಯಿ ತವರೂರು ನಮ್ಮ ಊರು ಆದ ಕಾರಣ, ಅವನ ಪರ ಸಾಕ್ಷಿ ಹೇಳಲು ಬಂದಿರುತ್ತೇನೆ ಎನ್ನುವುದು ನಿಜ. ನಾಗೇಂದ್ರಪ್ಪನ ಅಣ್ಣತಮ್ಮಂದಿರು ಭಾಗ ಆದಾಗಿನಿಂದಲೂ ನನಗೆ ಗೊತ್ತು. ಅವರು ಪಾಲು ವಿಭಾಗ ಪತ್ರ ನೊಂದಣಿ ಮಾಡಿಸುವಾಗ ನಾನು ಅವರ ಜೊತೆ ಹೋಗಿದ್ದೆ. ನಾಗೇಂದ್ರಪ್ಪ ಅಣ್ಣತಮ್ಮಂದಿರು ಅವರ ಪಿತ್ರಾರ್ಜಿತವಾದ ಆಸ್ತಿಗಳನ್ನು ಭಾಗ ಮಾಡಿಕೊಂಡಿರುತ್ತಾರೆ. ಸದರಿ ಪಾಲು ವಿಭಾಗದಲ್ಲಿ ಅವರ ತಂದೆಯ ಆಸ್ತಿ ದಾವಾ ಆಸ್ತಿಯು 1 ರಿಂದ 4 ನೇ ಪ್ರತಿವಾದಿಗಳ ಭಾಗಕ್ಕೆ ಬಂದಿರುತ್ತದೆ ಎನ್ನುವುದು ನಿಜ. ಸದರಿ ಆಸ್ತಿ ಪಿತ್ರಾರ್ಜಿತ ಆಸ್ತಿ ಎನ್ನುವುದು ಗೊತ್ತಿರುವುದಿಲ್ಲ. ಸದರಿ ಆಸ್ತಿ ಅವರ ತಂದೆಯ ಹೆಸರಿನಲ್ಲಿತ್ತು ಭಾಗ ಮಾಡಿಕೊಂಡಿರುತ್ತಾರೆ. 1 ರಿಂದ 4 ನೇ ಪ್ರತಿವಾದಿಗಳು ಯಾರ ಮಕ್ಕಳು ಎಂದು ಗೊತ್ತಿರುವುದಿಲ್ಲ, ಮುಖಪರಿಚಯ ಮಾತ್ರ ಇರುತ್ತದೆ. ಅವರ ಮನೆತನ ವ್ಯವಹಾರಗಳು ಮತ್ತು ಸಂಗತಿಗಳು ನನಗೆ ಗೊತ್ತಿರುವುದಿಲ್ಲ. 1 ರಿಂದ 4 ನೇ ಪ್ರತಿವಾದಿಗಳಿಗೆ ಎಷ್ಟೆಷ್ಟು ಜನ ಮಕ್ಕಳು ಇರುತ್ತಾರೆ ಎಂದು ಗೊತ್ತಿರುವುದಿಲ್ಲ. ದಾವಾ ಆಸ್ತಿ 1 ರಿಂದ 4 ನೇ ಪ್ರತಿವಾದಿಗಳಿಗೆ

ಯಾರಿಗೆ ಎಷ್ಟು ಸೇರಬೇಕು ಎನ್ನುವುದು ಗೊತ್ತಿರುವುದಿಲ್ಲ. ದಾವಾ ಆಸ್ತಿಯಲ್ಲಿ 1 ರಿಂದ 4 ನೇ ಪ್ರತಿವಾದಿಗಳ ಮಕ್ಕಳಿಗೆ ಏನು ಹಕ್ಕು ಇದೆ ಎಂದು ಗೊತ್ತಿರುವುದಿಲ್ಲ. ಆಸ್ತಿಗಳಲ್ಲಿ ಯಾರ್ಯಾರಿಗೆ ಭಾಗ ಹೋಗಬೇಕು ಎನ್ನುವ ಹಲವಾರು ಪಂಚಾಯಿತಿ ವ್ಯವಹಾರಗಳನ್ನು ಮಾಡಿರುತ್ತೇನೆ. ದಾವಾ ಆಸ್ತಿಯನ್ನು ನಾನು ದಿನಾಲು ನೋಡುತ್ತೇನೆ. ದಾವಾ ಆಸ್ತಿ ಭದ್ರಾ ಮೇಲ್ದಂಡೆಯಿಂದ 2 ಕಿ.ಮೀ ದೂರ ಇರುತ್ತದೆ. ಸದರಿ ಆಸ್ತಿ ಭದ್ರಾ ಮೇಲ್ದಂಡೆಯಿಂದ ಪಶ್ಚಿಮಕ್ಕೆ ಇರುತ್ತದೆ. ದಾವಾ ಆಸ್ತಿಯ ಪಶ್ಚಿಮಕ್ಕೆ ಬೆಟ್ಟ ಇರುತ್ತದೆ ಎನ್ನುವುದು ನಿಜ. ಸದರಿ ಬೆಟ್ಟದಲ್ಲಿ ದೊಡ್ಡ ಕೆರೆ ಇರುತ್ತದೆ ಎನ್ನುವುದು ನಿಜ. ಎಂದಿಗೂ ಸದರಿ ಕೆರೆಯ ನೀರು ಬತ್ತುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕೆರೆಯಲ್ಲಿ ಯಾವಾಗಲೂ ನೀರು ಇದ್ದರು ಸಹ ಬತ್ತುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸುತ್ತಲೂ ಅಡಿಕೆ ತೋಟಗಳು ಇರುತ್ತವೆ ಎಂದರೆ ಸಾಕ್ಷಿ ಕೆಲವು ಇರುತ್ತವೆ, ಕೆಲವು ಬೆದ್ದಲು ಇರುತ್ತವೆ ಎಂದು ಹೇಳುತ್ತಾರೆ. ದಾವಾ ಆಸ್ತಿ ಫಲವತ್ತಾದ ಭೂಮಿ ಎಂದರೆ ಸಾಕ್ಷಿ ಕೆಂಗಲು ಮಣ್ಣು ಎಂದು ಹೇಳುತ್ತಾರೆ. ಕೆಂಗಲು ಮಣ್ಣಿನ ಜಮೀನಿನಲ್ಲಿ ಎಲ್ಲಾ ತರಹದ ಬೆಳೆಯನ್ನು ಬೆಳೆಯಬಹುದು ಎನ್ನುವುದು ನಿಜ. ದಾವಾ ಆಸ್ತಿಯ ಸುತ್ತಮುತ್ತಲು ಮ್ಯಾಂಗನೀಸ್ ಇರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ದಾವಾ ಆಸ್ತಿಯು ಕೂಡ ಮ್ಯಾಂಗನೀಸ್ ಇರುವ ಭೂಮಿ ಎಂದರೆ ಸರಿಯಲ್ಲ. 2019 ರಲ್ಲಿ ಫಲವತ್ತಾದ ಭೂಮಿ ಎಕರೆಗೆ ಎಷ್ಟು ಇತ್ತು ಎಂದರೆ ಸಾಕ್ಷಿ ಅದರ ಬೆಲೆ ಗೊತ್ತಿಲ್ಲ, ಆದರೆ ಭೂಮಿ ಮೇಲೆ ಬೆಲೆ ಇತ್ತು ಎಂದು ಹೇಳುತ್ತಾರೆ. ದಾವಾ ಆಸ್ತಿಯ ಪಕ್ಕದಲ್ಲಿರುವ ಅಡಿಕೆ ತೋಟ ಎಕರೆಗೆ ಎಷ್ಟು ಬೆಲೆ ಬಾಳುತ್ತಿತ್ತು ಎಂದು ಗೊತ್ತಿರುವುದಿಲ್ಲ. ನಾಕಿಕೆರೆಯಲ್ಲಿ ಇರುವ ಜಮೀನು ಎಕರೆಗೆ ಎಷ್ಟು ಬಾಳುತ್ತವೆ ಎಂದು ಗೊತ್ತಿರುವುದಿಲ್ಲ. ನಾನು ಉಪನೊಂದಣಾಧಿಕಾರಿಯ ಕಛೇರಿಗೆ ಹೋಗಿ ಎಷ್ಟು ಪತ್ರಗಳಿಗೆ ಸಹಿ ಮಾಡಿರುತ್ತೇನೆ ಎಂದು ಗೊತ್ತಿರುವುದಿಲ್ಲ. 2005 ರಿಂದ ಇಲ್ಲಿಯವರೆವಿಗೂ 15-20 ಪತ್ರಗಳಿಗೆ ಸಹಿ ಮಾಡಿರಬಹುದು. ಕ್ರಯಕ್ಕೆ ಕೊಡುವವರಿಗೂ ತೆಗೆದುಕೊಳ್ಳುವವರಿಗೂ ಮಾಹಿತಿ ಇರುತ್ತಿರಲಿಲ್ಲ ನಾವೇ ಮುಂದೆ ನಿಂತು ಪತ್ರ ಬರಹಗಾರರಿಗೆ ಮಾಹಿತಿಯನ್ನು ಕೊಟ್ಟು ಮಾಡಿಸಿಕೊಂಡು ಬರುತ್ತಿದ್ದೇವು ಎಂದರೆ ಸರಿಯಲ್ಲ. ನಾನು ಆ ರೀತಿ ಪತ್ರ ವ್ಯವಹಾರವನ್ನು ಹಣ ಪಡೆದು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಯಾರು ಹಣ ಕೊಡುತ್ತಿರಲಿಲ್ಲ ಅವರ ವಿರುದ್ಧ ತಿರುಗಿ ಬೀಳುತ್ತಿದ್ದೆ ಎಂದರೆ ಸರಿಯಲ್ಲ. ಅಂತವರ ವಿರುದ್ಧ ನಾನು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳುತ್ತಿದ್ದೆ ಎಂದರೆ ಸರಿಯಲ್ಲ.

ನಿಪಿಃ 2 ನ್ನು ಮಾಡಿಸುವಾಗ ನಾನು ಇದ್ದೆ. ಆ ಸಮಯದಲ್ಲಿ ಮಂಜುನಾಥ, ಗುರುಸಿದ್ದಪ್ಪ, ಆಶಾ ಮತ್ತು ಅವರು 4 ಜನರು ಇದ್ದರು. ಪತ್ರವನ್ನು ಬರೆಯಲು ಅರ್ಧ ಗಂಟೆಯಿಂದ ಮುಕ್ಕಾಲು ಗಂಟೆ ಆಗಿರುತ್ತದೆ. ಸದರಿ ಪತ್ರದಲ್ಲಿ ಏನೇನು ಬರೆದಿರುತ್ತದೆ ಎಂದು ಹೇಳಲು ಆಗುತ್ತದೆಯೇ ಎಂದರೆ ಸಾಕ್ಷಿ ನೋಡಿದರೆ ಹೇಳುತ್ತೇನೆ ಎಂದು ಹೇಳುತ್ತಾರೆ. ಸದರಿ ಪತ್ರ ಡಿ. ಟಿ. ಪಿ. ಮಾಡಿಸುವಾಗ ಎಲ್ಲರೂ ಜೊತೆಯಲ್ಲಿ ಇದ್ದೇವು. ಆ ಸಮಯದಲ್ಲಿ ನಾವು ಹೊರಗೆ

ಇದ್ದೇವು. ನಾವು ಹೊರಗೆ ಇದ್ದ ಕಾರಣ, ಡಿ.ಟಿ.ಪಿ.ಯಲ್ಲಿ ಏನೇನು ಮಾಡಿಸಿರುತ್ತಾರೆ ಎಂದು ಗೊತ್ತಿಲ್ಲ ಎನ್ನುವುದು ನಿಜ. ಸದರಿ ಪತ್ರದಲ್ಲಿ ಮೂರು ತಿಂಗಳ ಒಳಗೆ ನಮ್ಮ ಮಕ್ಕಳನ್ನು ಕರೆದುಕೊಂಡು ಬಂದು ಸಹಿ ಮಾಡಿಸಿ, ನೊಂದಣಿ ಮಾಡಿಸಿಕೊಡುತ್ತೇವೆ ಎಂಬ ಷರತ್ತು ಇತ್ತು. ಬೇರೆ ಯಾವುದೇ ಷರತ್ತನ್ನು ಬರೆಸಿರಲಿಲ್ಲ. ಸದರಿ ಷರತ್ತನ್ನು ಎಲ್ಲರ ಎದುರು ಅದನ್ನು ಬರೆದವರು ಓದಿ ಹೇಳಿರುತ್ತಾರೆ. ಸದರಿ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ. ನಾನು ಸದರಿ ಪತ್ರಕ್ಕೆ ಒಂದು ಸಹಿ ಮಾಡಿರುತ್ತೇನೆ. ಮಂಜುನಾಥ 2 ಸಹಿಗಳನ್ನು ಮಾಡಿರುತ್ತಾನೆ. ಸದರಿ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿದ ನಂತರ ನಾವು ಅಲ್ಲೇ ಇದ್ದೇವು. ಸದರಿ ಪತ್ರಕ್ಕೆ ಸಿದ್ದೇಶ ತಂದೆ ನಿಂಗಪ್ಪ, ಮಂಜುನಾಥ ತಂದೆ ಡಿ. ಭೈರಪ್ಪ ಮತ್ತು ಆಶಾ ಹಾಗೂ ಅವರು 4 ಜನ ಸಹಿ ಮಾಡಿರುತ್ತಾರೆ. ಸದರಿ ಪತ್ರಕ್ಕೆ ಸಹಿಯನ್ನು ಉಪನೊಂದಣಾಧಿಕಾರಿಗಳ ಮುಂದೆ ಸಹಿ ಮಾಡಿರುತ್ತೇನೆ. ಉಪನೊಂದಣಾಧಿಕಾರಿಗಳು ಯಾರ್ಯಾರನ್ನು ಮೊದಲು ಕರೆದು ಸಹಿ ಮಾಡಿಸಿರುತ್ತಾರೆ ಎಂದು ನೆನಪು ಇರುವುದಿಲ್ಲ. ಅವರೆಲ್ಲರು ಸಹಿ ಮಾಡಿದಾಗ ಸಮಯ ಎಷ್ಟು ಗಂಟೆ ಆಗಿರುತ್ತದೆ ಎಂದು ಗೊತ್ತಿರುವುದಿಲ್ಲ. ಒಬ್ಬೊಬ್ಬರನ್ನು ಒಳಗೆ ಕರೆದು ಸಹಿ ಮಾಡಿಸಿದ್ದರಿಂದ, ಯಾರು ಏನು ಸಹಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ ಎಂದರೆ ಸಾಕ್ಷಿ ಅವರು 4 ಜನರನ್ನು ಕರೆದು ಸಹಿ ಮಾಡಿಸಿ ನಂತರ ನಮ್ಮನ್ನು ಕರೆದು ಸಹಿ ಮಾಡಿಸಿರುತ್ತಾರೆ ಎಂದು ಹೇಳುತ್ತಾರೆ. ನಿಪಿಃ 2 ರಲ್ಲಿ 3 ನೇ ಪ್ರತಿವಾದಿಯ ಸಹಿಯನ್ನು ನಾನು, ಉಳಿದ ಸಾಕ್ಷಿದಾರರು, ಪತ್ರಬರಹಗಾರ ಮತ್ತು ಆಶಾ ಸೇರಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವ್ಯವಹಾರ ಎಲ್ಲಿ ಮತ್ತು ಯಾವಾಗ ನಡೆದಿರುತ್ತದೆ ಎಂದು ಗೊತ್ತಿರುತ್ತದೆ. ಬೆಳಗ್ಗೆ 9 ಗಂಟೆ ಸಮಯದಲ್ಲಿ ಸದರಿ ವ್ಯವಹಾರ ನಡೆದಿರುತ್ತದೆ. ದಿಃ 04.04.2019 ರಂದು ನಡೆದಿರುತ್ತದೆ. ಸದರಿ ವ್ಯವಹಾರ ನಡೆಯುವಾಗ ಸುಮಾರು 10 ಜನ ಸೇರಿದ್ದೇವು. ಸದರಿ ವ್ಯವಹಾರ ಅರ್ಧ ಗಂಟೆಯಲ್ಲಿ ಮುಗಿದಿರುತ್ತದೆ. ಮಾತುಕತೆ ವ್ಯವಹಾರ ಅದೇ ದಿನ ಮೊದಲು ಅದೇ ದಿನ ಕೊನೆಯ ಎಂದರೆ ಸಾಕ್ಷಿ ಅದರ ಹಿಂದಿನದು ಗೊತ್ತಿಲ್ಲ ಎಂದು ಹೇಳುತ್ತಾರೆ. ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಗಳು ಹೇಗೆ ಪರಿಚಯ ಮತ್ತು ಸಂಬಂಧ ಎಂದು ಗೊತ್ತಿರುವುದಿಲ್ಲ. ಸದರಿಯವರು ಈ ಸ್ವತ್ತಿನ ಬಗ್ಗೆ ಯಾವಾಗ, ಹೇಗೆ, ಏನೇನು ವ್ಯವಹಾರ ಮಾತನಾಡಿಕೊಂಡಿದ್ದರು ಎಂದು ಗೊತ್ತಿರುವುದಿಲ್ಲ. ಅವರು ಮಾರಾಟದ ಪ್ರತಿಫಲದ ಬಗ್ಗೆ ಮತ್ತು ಹಣದ ಬಗ್ಗೆ ಏನೇನು ಮಾತನಾಡಿಕೊಂಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಅವರು ಈ ಹಿಂದೆ ಮಾತನಾಡಿದಾಗ ಯಾವ ಷರತ್ತುಗಳು ಬಗ್ಗೆ ಮಾತನಾಡಿದ್ದರು ಎಂದು ಗೊತ್ತಿರುವುದಿಲ್ಲ. ಆ ದಿನ 4 ನೇ ಪ್ರತಿವಾದಿಯ ಮನೆಯಲ್ಲಿ ಸೇರಿದ್ದ ಇತರೆ ಜನರು ಯಾರು ಎಂದು ನಾನು ವಿಚಾರ ಮಾಡಿಲ್ಲ. ಕ್ರಯದ ವ್ಯವಹಾರ ಆಗುವಾಗ ಯಾರ್ಯಾರಿಗೆ ಹಕ್ಕು ಇದೆ ಎಂದು ಮಾತನಾಡಿದ್ದೀರ ಎಂದರೆ ಸಾಕ್ಷಿ ಅದು ಗೊತ್ತಿಲ್ಲ ಎಂದು ಹೇಳುತ್ತಾರೆ. ಆ ದಿನ 3 ನೇ ಪ್ರತಿವಾದಿ ಚೆನ್ನಾಗಿ ಇದ್ದ ಕಾರಣ, ನಾನು ಅವರ ಆರೋಗ್ಯದ ಬಗ್ಗೆ ನಾನು ವಿಚಾರ ಮಾಡಿಲ್ಲ. ಮಾತುಕತೆಯ ಸಮಯದಲ್ಲಿ 3 ನೇ ಪ್ರತಿವಾದಿ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ವ್ಯವಹಾರದಲ್ಲಿ 3 ನೇ ಪ್ರತಿವಾದಿ ಬಾಗಿ ಆಗಿಲ್ಲ ಎಂದರೆ ಸರಿಯಲ್ಲ.

ನಿಪಿಃ 02 ರಲ್ಲಿನ ವಿಷಯಗಳು 3 ನೇ ಪ್ರತಿವಾದಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಮರೆವಿನ ಕಾಯಿಲೆ ಇದ್ದು ಹಣದ ದುರಾಸೆಯ ಸಲುವಾಗಿ ನಾನು ಸೇರಿ ಅವನ ಮಕ್ಕಳಿಗೆ ಮೋಸ ಮಾಡಿರುತ್ತೇವೆ ಎಂದರೆ ಸರಿಯಲ್ಲ. 1 ರಿಂದ 4 ನೇ ಪ್ರತಿವಾದಿಗಳು 10,80,000/- ರೂ.ಗಳಿಗೆ ಕ್ರಯ ನಿಷ್ಕರ್ಷ ಮಾಡಿ ಅದರ ಬಾಬ್ತು 4,60,000/- ರೂ.ಗಳನ್ನು ವಾದಿಯಿಂದ ಪಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ವ್ಯವಹಾರ ನಡೆದಿದೆ ಎಂದು ಹೇಳಿರುವುದೇ ಸುಳ್ಳು ಎಂದರೆ ಸರಿಯಲ್ಲ. ಆ ದಿನ ವಾದಿಯ ಬಳಿ 4,60,000/- ರೂ. ಗಳನ್ನು ಕೊಡಲು ಅವಳ ಬಳಿ ಹಣ ಇರಲಿಲ್ಲ ಎಂದರೆ ಸರಿಯಲ್ಲ. ಉಳಿದ 6,20,000/- ರೂ.ಗಳನ್ನು ಕ್ರಯಪತ್ರ ನೊಂದಣಿ ಮಾಡಿಸಿಕೊಡುವಾಗ ಕೊಡುತ್ತೇವೆ ಎಂದು ಒಪ್ಪಿ ದಿಃ 04.04.2019 ರಂದು ನೊಂದಾಯಿತ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವ್ಯವಹಾರವನ್ನು ಮಾಡುವಾಗ ನಾನು ಹಾಜರಿದ್ದು, ನನಗೆ ಖುದ್ದು ಮಾಹಿತಿ ಇರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ ಎಂದು ವಾದಿ ಮತ್ತು ಅವಳ ಗಂಡನ ಮಾತನ್ನು ಕೇಳಿ ಅವರಿಗೆ ಅನುಕೂಲ ಆಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವೆಲ್ಲರು ಮಿಲಾಪಿಯಾಗಿ ಪತ್ರವನ್ನು ಸೃಷ್ಟಿಸಿದ್ದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವೆಲ್ಲರು ಸೇರಿ 3 ನೇ ಪ್ರತಿವಾದಿಯ ಹೆಸರಿನಲ್ಲಿ ನಿಪಿಃ 02 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಮರವಿನ ಕಾಯಿಲೆ ದುರುಪಯೋಗ ಪಡಿಸಿಕೊಂಡು ಅವನ ಮಕ್ಕಳಿಗೆ ಮೋಸ ಮಾಡುವ ಸಲುವಾಗಿ ವಾದಿಯ ಜೊತೆ ನಾವೆಲ್ಲರು ಸೇರಿ ನಿಪಿಃ 02 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಊರಲ್ಲಿ ಯಾರು ಹಣದ ಸಹಾಯ ಮಾಡುತ್ತಾರೆ ನಾನು ಅವರ ಪರ ಬಂದು ಸುಳ್ಳು ಸಾಕ್ಷಿ ಹೇಳುತ್ತೇನೆ ಎಂದರೆ ಸರಿಯಲ್ಲ. ವಾದಿ ಮತ್ತು ಅವನ ಗಂಡನಿಂದ ನಾನು ತುಂಬ ಸಹಾಯ ಪಡೆದಿದ್ದರಿಂದ ಅವರ ಪರ ಸುಳ್ಳು ಸಾಕ್ಷಿ ಹೇಳುತ್ತೇನೆ ಎಂದರೆ ಸರಿಯಲ್ಲ. ಊರಲ್ಲಿ ಒಬ್ಬರಿಗೊಬ್ಬರಿಗೂ ಜಗಳ ತಂದು ಇಟ್ಟು ವ್ಯಾಜ್ಯ ಮಾಡುವುದೇ ನನ್ನ ಕೆಲಸ ಎಂದರೆ ಸರಿಯಲ್ಲ. ಯಾರು ನನಗೆ ಸಹಾಯ ಮಾಡುತ್ತಾರೋ ಅವರನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ಎದುರುದಾರರ ವಿರುದ್ಧ ದೂರನ್ನು ಕೊಡಿಸುವುದು ನನ್ನ ಕೆಲಸ ಎಂದರೆ ಸರಿಯಲ್ಲ. ನಾನು ವರದಕ್ಷಿಣೆ ಕೇಸನ್ನು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಕೇಸಿನ ಬಗ್ಗೆ ಹಾಗೂ ದಾವಾ ಆಸ್ತಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಷಯಗಳೆಲ್ಲವು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

ಪಾಟೀ ಸವಾಲು **1** ರಿಂದ **4** ನೇ ಪ್ರತಿವಾದಿಗಳ ಪರः **1** ರಿಂದ **4** ನೇ ಪ್ರತಿವಾದಿಗಳು ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದ ಕಾರಣ, ಏನು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.